ಮೂರು ವರ್ಷಗಳಿಂದ ಬೀದರ್ ಜಿಲ್ಲೆಯಲ್ಲಿ ವಸತಿ ಮನೆಗಳು

159 (492) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ):–ಮಾನ್ಯ ವಸತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ ಮೂರು ವರ್ಷಗಳಿಂದ ಬೀದರ್ ಜಿಲ್ಲೆಗೆ ವಿವಿಧ ವಸತಿ ಯೋಜನೆಗಳಡಿಯಲ್ಲಿ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು? ವರ್ಷಾವಾರು ಯೋಜನೆಗಳವಾರು ಹಾಗೂ ತಾಲ್ಲೂಕುವಾರು ವಿವರಗಳನ್ನು ನೀಡುವುದು?

ಆ) ಹಾಗಿದ್ದಲ್ಲಿ, ವಿವಿಧ ಯೋಜನೆಗಳಡಿ ಇದುವರೆವಿಗೂ ಹಂಚಿಕೆಯಾಗಿರುವ ಮನೆಗಳ ಸಂಖ್ಯೆ ಎಷ್ಟು? ಯೋಜನೆಗಳು ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು?

ಇ) ಹಾಗಿದ್ದಲ್ಲಿ, ಅರ್ಹ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆಯೇ?

ಈ) ಫಲಾನುಭವಿಗಳನ್ನು ಆಯ್ಕೆ ಮಾಡಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು;

ಉ) ಬೀದರ್ ಜಿಲ್ಲೆಯಲ್ಲಿ ಅರ್ಹ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಯಾವಾಗ ಹಂಚಿಕೆ ಮಾಡಲಾಗುವುದು?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):–

ಅ) <u>ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ:</u>

ಕಳೆದ ಮೂರು ವರ್ಷಗಳಿಂದ ಅಂದರೆ 2008–09 ರಿಂದ 2010–11ರ ವರೆಗೆ ಬೀದರ್ ಜಿಲ್ಲೆಗೆ ವಿವಿಧ ವಸತಿ ಯೋಜನೆಗಳಡಿಯಲ್ಲಿ 29.449 ಮಂಜೂರಾಗಿದ್ದು. ಯೋಜನಾವಾರು, ತಾಲ್ಲೂಕುವಾರು ಹಾಗೂ ವರ್ಷವಾರು ಮಾಹಿತಿಯನ್ನು ಅನುಬಂಧ–"1" ರಲ್ಲಿ ಲಗತ್ತಿಸಿದೆ.

<u>ಕರ್ನಾಟಕ ಗೃಹ ಮಂಡಳಿ:</u>

ಕರ್ನಾಟಕ ಗೃಹ ಮಂಡಳಿಯು ಕಳೆದ ಮೂರು ವರ್ಷಗಳಲ್ಲಿ ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ತಾಲ್ಲೂಕುವಾರು ವರ್ಷವಾರು ಮತ್ತು ಯೋಜನಾವಾರು ಹಂಚಿಕೆ ಮಾಡಿರುವ ಮನೆಗಳ ವಿವರಗಳನ್ನು ಅನುಬಂಧ "2"ರಲ್ಲಿ ಲಗತ್ತಿಸಿದೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:

2008–09, 2009–10 ಮತ್ತು 2010–11ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಯಾವುದೇ ವಸತಿ ಯೋಜನೆಗಳು ಮಂಜೂರಾಗಿರುವುದಿಲ್ಲ.

ಆ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ:

ಕಳೆದ ಮೂರು ವರ್ಷಗಳಿಂದ ಅಂದರೆ 2008–09 ರಿಂದ 2010–11ರ ವರೆಗೆ ಬೀದರ್ ಜಿಲ್ಲೆಗೆ ವಿವಿದ ವಸತಿ ಯೋಜನೆಗಳಡಿ ಈ ವರೆಗೆ ಹಂಚಿಕೆಯಾಗಿರುವ (ಆಯ್ಕೆಯಾಗಿರುವ ಫಲಾನುಭವಿಗಳು) ಮನೆಗಳ ವಿವರವನ್ನು ಅನುಬಂಧ "3"ರಲ್ಲಿ ಲಗತ್ತಿಸಿದೆ.

ಕರ್ನಾಟಕ ಗೃಹ ಮಂಡಳಿ:

ಮಾಹಿತಿಯನ್ನು ಅನುಬಂಧ–"2" ರಲ್ಲಿ ಲಗತ್ತಿಸಿದೆ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:

ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ

ಇ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ:

ಹೌದು

ಕರ್ನಾಟಕ ಗೃಹ ಮಂಡಳಿ:

ಹೌದು

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ

ಈ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ:

ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳು ಈ ಕೆಳಗಿನಂತಿವೆ.

1) ಆಯ್ಕೆಯಾಗಲ್ಪಡುವ ಕುಟುಂಬವು ಬಡತನ ರೇಖೆಗಿಂತ ಕೆಳಗಿದ್ದು, ವಸತಿ ರಹಿತ ಕುಟುಂಬವಾಗಿರಬೇಕು.

2) ಮಹಿಳೆಯ ಹೆಸರಿನಲ್ಲಿ ಸ್ವಂತ ನಿವೇಶನವನ್ನು ಹೊಂದಿರಬೇಕು (ಪುರುಷರಾಗಿದ್ದಲ್ಲಿ ಅಂಗವಿಕಲ, ಮಾಜಿ ಸೈನಿಕ, ಹಿರಿಯ ನಾಗರೀಕ ಅಥವಾ

ವಿಧುರರಾಗಿರಬೇಕು.

3) ಸದರಿ ಕುಟುಂಬವು ಗುಡಿಸಲು/ಶೀಥಿಲಗೊಂಡಿರುವ ಮನೆ ಅಥವಾ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರಬೇಕು.

4) ಸದರಿ ಕುಟುಂಬಕ್ಕೆ ಹಿಂದಿನ ಯಾವುದೇ ವಸತಿ ಯೋಜನೆಯಡಿ ಮನೆ ಮಂಜೂರಾಗಿರಬಾರದು.

ಕರ್ನಾಟಕ ಗೃಹ ಮಂಡಳಿ:

ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಾವಳಿ 1983ರ ನಿಯಮ 8 ಮತ್ತು 9 ರನ್ವಯ ಲಾಟರಿ ಪ್ರಕ್ರಿಯೆ ಮೂಲಕ ಹಂಚಿಕೆ ಮಾಡಲಾಗಿದೆ. ಮಾನದಂಡಗಳು ಈ ಕೆಳಕಂಡಂತಿವೆ.

1) ಅರ್ಜಿದಾರರು ಅರ್ಜಿಸಲ್ಲಿಸುವುದಕ್ಕೆ ಮೊದಲು ರಾಜ್ಯದಲ್ಲಿ 10 ವರ್ಷಗಳ ಕಾಲ ವಾಸವಾಗಿರಬೇಕು.

2) ಅರ್ಜಿದಾರರು ತಮ್ಮ ಹೆಸರಿನಲ್ಲಿ ತಮ್ಮ ಕುಟುಂಬ ಸದಸ್ಯರ ಹೆಸರಿನಲ್ಲಿ ರಾಜ್ಯದ ಯಾವುದೇ ಪ್ರಾಧಿಕಾರದಿಂದ ಮನೆ/ನಿವೇಶನ/ಫ್ಲಾಟ್‌ಗಳನ್ನು ಹೊಂದಿರುವುದಿಲ್ಲವೆಂದು ಪ್ರಮಾಣ ಪತ್ರ ಸಲ್ಲಿಸಿರಬೇಕು.

3) ಆರ್ಥಿಕವಾಗಿ ಹಿಂದುಳಿದ (ಇ.ಡ್ಯೂ.ಎಸ್.) ವರ್ಗದ ನಿವೇಶನ/ಮನೆಗಳಿಗೆ ಅರ್ಜಿಸಲ್ಲಿಸುವವರು ತಮ್ಮ ಕುಟುಂಬದ ವಾರ್ಷಿಕ ವರಮಾನ ರೂ. 17.000 ಕ್ಕಿಂತ ಹೆಚ್ಚಿಗೆ ಮೀರದಿರುವ ಬಗ್ಗೆ ವಾರ್ಷಿಕ ವರಮಾನ ಪತ್ರವನ್ನು ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದು ಸಲ್ಲಿಸತಕ್ಕದ್ದು.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಉದ್ಭವಿಸುವುದಿಲ್ಲ

ಊ) **ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ:**

ಬೀದರ್ ಜಿಲ್ಲೆಗೆ ವಿವಿಧ ವಸತಿ ಯೋಜನೆಗಳಡಿ ಮಂಜೂರು ಮಾಡಿರುವ ಮನೆಗಳ ಗುರಿಗೆ ಎದುರಾಗಿ ಅನರ್ಹ ಫಲಾನುಭವಿಗಳು ಆಯ್ಕೆಯಾಗಿತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಸದರಿ ದೂರುಗಳನ್ನು ಪರಿಶೀಲಿಸಿ, ಅನರ್ಹ ಫಲಾನುಭವಿಗಳನ್ನು ರದ್ದುಪಡಿಸಿ, ಅರ್ಹ ಫಲಾನುಭವಿಗಳಿಗೆ ಮಾತ್ರ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡಲು ಕ್ರಮ ಕೈಗೊಳ್ಳುವಂತೆ ಎಲ್ಲಾ ಅನುಷ್ಠಾನಾಧಿಕಾರಿಗಳಿಗೂ ತಿಳಿಸಲಾಗಿರುತ್ತದೆ.

ಕರ್ನಾಟಕ ಗೃಹ ಮಂಡಳಿ:

ಕರ್ನಾಟಕ ಗೃಹ ಮಂಡಳಿಯಿಂದ ಅಭಿವೃದ್ಧಿ ಪಡಿಸಿದ ಬಡಾವಣೆಯಲ್ಲಿ ನಿರ್ಮಿಸಿದ ಮನೆಗಳನ್ನು ಮಂಡಳಿ ನಿಯಮಾನುಸಾರ ಅರ್ಹ ಫಲಾನುಭವಿಗಳಿಗೆ ಲಾಟರಿ ಮೂಲಕ ಹಂಚಿಕೆ ಮಾಡಲಾಗಿದೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಉದ್ಭವಿಸುವುದಿಲ್ಲ

ಊ) **ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ:**

ಪ್ರಕ್ರಿಯೆಯು ಪ್ರಗತಿಯಲ್ಲಿದೆ

ಕರ್ನಾಟಕ ಗೃಹ ಮಂಡಳಿ:

ಉದ್ಭವಿಸುವುದಿಲ್ಲ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಉದ್ಭವಿಸುವುದಿಲ್ಲ

ಅನುಬಂಧ–3

ಕಳೆದ ಮೂರು ವರ್ಷಗಳಿಂದ ಅಂದರೆ 2008–09 ರಿಂದ 2010–11ರ ವರೆಗೆ ಬೀದರ್ ಜಿಲ್ಲೆಗೆ ಮಂಜೂರು ಮಾಡಿರುವ ಮನೆಗಳ ವಿವರ

ಕ್ರ. ಸಂ.	ತಾಲ್ಲೂಕು/ ಪಟ್ಟಣ	ಯೋಜನೆ	ಮಂಜೂರಾದ ಮನೆಗಳ ಸಂಖ್ಯೆ			
			2008–09	2009–10	2010–11	ಒಟ್ಟು
1	ಔರಾದ್	ಗ್ರಾಮೀಣ ಆಶ್ರಯ	1350	0	0	1350
2	ಔರಾದ್	ಗ್ರಾಮೀಣ ಅಂಬೇಡ್ಕರ್	321	152	156	629
3	ಔರಾದ್	ಇಂದಿರಾ ಆವಾಸ್ ಯೋಜನೆ	936	1897	0	2833
4	ಔರಾದ್	ಬಸವ ವಸತಿ ಯೋಜನೆ	0	0	7428	7428
5	ಔರಾದ್	ವಾಜಪೇಯಿ ನಗರ ವಸತಿ ಯೋಜನೆ	0	0	75	75
		ಒಟ್ಟು	**2607**	**2049**	**7659**	**12315**
6	ಬಸವಕಲ್ಯಾಣ	ಗ್ರಾಮೀಣ ಆಶ್ರಯ	1320	0	0	1320
7	ಬಸವಕಲ್ಯಾಣ	ಗ್ರಾಮೀಣ ಅಂಬೇಡ್ಕರ್	141	134	138	413
8	ಬಸವಕಲ್ಯಾಣ	ಇಂದಿರಾ ಆವಾಸ್ ಯೋಜನೆ	590	900	0	1490
9	ಬಸವಕಲ್ಯಾಣ	ಬಸವ ವಸತಿ ಯೋಜನೆ	0	0	2000	2000
10	ಬಸವಕಲ್ಯಾಣ	ವಾಜಪೇಯಿ ನಗರ ವಸತಿ ಯೋಜನೆ	0	0	300	300
		ಒಟ್ಟು	**2051**	**1034**	**2438**	**5523**
11	ಬಾಲ್ಕಿ	ಗ್ರಾಮೀಣ ಆಶ್ರಯ	1225	0	0	1225
12	ಬಾಲ್ಕಿ	ಗ್ರಾಮೀಣ ಅಂಬೇಡ್ಕರ್	81	113	115	309
13	ಬಾಲ್ಕಿ	ಇಂದಿರಾ ಆವಾಸ್ ಯೋಜನೆ	628	875	0	1503
14	ಬಾಲ್ಕಿ	ಬಸವ ವಸತಿ ಯೋಜನೆ	0	0	200	200
15	ಬಾಲ್ಕಿ	ವಾಜಪೇಯಿ ನಗರ ವಸತಿ ಯೋಜನೆ	0	0	125	125
		ಒಟ್ಟು	**1934**	**988**	**440**	**3362**
16	ಬೀದರ್	ಗ್ರಾಮೀಣ ಆಶ್ರಯ	825	0	0	825
17	ಬೀದರ್	ಗ್ರಾಮೀಣ ಅಂಬೇಡ್ಕರ್	116	20	0	136
18	ಬೀದರ್	ಇಂದಿರಾ ಆವಾಸ್ ಯೋಜನೆ	612	825	0	1437
19	ಬೀದರ್	ಬಸವ ವಸತಿ ಯೋಜನೆ	0	0	2000	2000
20	ಬೀದರ್	ವಾಜಪೇಯಿ ನಗರ ವಸತಿ ಯೋಜನೆ	0	0	300	300
		ಒಟ್ಟು	**1553**	**845**	**2300**	**4698**
21	ಹುಮನಾಬಾದ್	ಗ್ರಾಮೀಣ ಆಶ್ರಯ	1175	0	0	1175
22	ಹುಮನಾಬಾದ್	ಗ್ರಾಮೀಣ ಅಂಬೇಡ್ಕರ್	152	117	120	389
23	ಹುಮನಾಬಾದ್	ಇಂದಿರಾ ಆವಾಸ್ ಯೋಜನೆ	712	825	0	1537
24	ಹುಮನಾಬಾದ್	ಬಸವ ವಸತಿ ಯೋಜನೆ	0	0	200	200
25	ಹುಮನಾಬಾದ್	ವಾಜಪೇಯಿ ನಗರ ವಸತಿ ಯೋಜನೆ	0	0	125	125
		ಒಟ್ಟು	**2039**	**942**	**445**	**3426**
26	ಚಿಟಿಗುಪ್ಪ	ವಾಜಪೇಯಿ ನಗರ ವಸತಿ ಯೋಜನೆ	0	0	125	125
		ಒಟ್ಟು	**0**	**942**	**445**	**3426**
		ಅಂತೂ ಒಟ್ಟು	**10184**	**5858**	**13407**	**29449**

**ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ನೀಡಲಾದ ಗುರಿಗಿಂತ ಪ್ರಗತಿ ಸಾಧಿಸಲು ಹೆಚ್ಚಿನ ಗುರಿಯನ್ನು ನೀಡಿ ಅದಕ್ಕೆ ಅನುಗುಣವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ.*

ಅನುಬಂಧ–2

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೀದರ್ ಜಿಲ್ಲೆ ವಿವಿಧ ಬಡಾವಣೆಗಳಲ್ಲಿ 2008–09 ರಿಂದ 2010–11ನೇ ಸಾಲಿನಲ್ಲಿ ಮತ್ತು 2011–12ನೇ ಸಾಲಿನಲ್ಲಿ ಇದುವರೆಗೆ ನಿರ್ಮಿಸಿರುವ /ನಿರ್ಮಿಸಲಾಗುತ್ತಿರುವ ಹಾಗೂ ಹಂಚಿಕೆ ಮಾಡಿರುವ ಮನೆಗಳ ವಿವರಗಳು

ಕ್ರ.. ಸಂ.	*ವರ್ಷ*	*ಬಡಾವಣೆ ಹೆಸರು*	*ತಾಲ್ಲೂಕು*	*ನಿರ್ಮಿಸಿರುವ/ ನಿರ್ಮಿಸಲಾಗುತ್ತಿರುವ ಮನೆಗಳ ವಿವರ*	*ಹಂಚಿಕೆ ಮಾಡಿರುವ ಮನೆಗಳ ವಿವರ*	*ಷರಾ*
1	2008–09	ಯಾವುದೂ ಇಲ್ಲ	–	–	–	–
2	2009–10	ಹಳ್ಳದಕೇರಿ–ಬೀದರ್	ಬೀದರ್	25	18	–
3	2010–11	ಯಾವುದೂ ಇಲ್ಲ	–	–	ಯಾವುದೂ ಇಲ್ಲ	–
4	2011–12	ಚಿಟ್ಟಿ–ಬೀದರ್	ಬೀದರ್	48	25	–
5	ನೇ ಸಾಲಿನಲ್ಲಿ ಇದುವರೆಗೆ	ಔರಾದ್	ಔರಾದ್	10	–	ಮನೆಗಳ ನಿರ್ಮಾಣ ಪ್ರಗತಿಯಲ್ಲಿವೆ
6	–	ಗುನ್ನಳ್ಳಿ–ಬೀದರ್	ಬೀದರ್	10	–	ಮನೆಗಳ ನಿರ್ಮಾಣ ಪ್ರಗತಿಯಲ್ಲಿವೆ
			ಒಟ್ಟು	93	43	

ಅನುಬಂಧ–3

ಕಳೆದ ಮೂರು ವರ್ಷಗಳಿಂದ ಅಂದರೆ 2008–09 ರಿಂದ 2010–11ರ ವರೆಗೆ ಬೀದರ್ ಜಿಲ್ಲೆಗೆ ಮಂಜೂರು ಮಾಡಿರುವ ಮನೆಗಳಲ್ಲಿ 2011ರ ನವೆಂಬರ್ ಅಂತ್ಯದವರೆಗೆ ಹಂಚಿಕೆಯಾಗಿರುವ (ಆಯ್ಕೆಯಾಗಿರುವ ಫಲಾನುಭವಿಗಳು) ಮನೆಗಳ ವಿವರ

ಕ್ರ. ಸಂ.	ತಾಲ್ಲೂಕು	ಯೋಜನೆ	ಹಂಚಿಕೆಯಾಗಿರುವ (ಆಯ್ಕೆಯಾಗಿರುವ ಫಲಾನುಭವಿಗಳು) ಮನೆಗಳ ಸಂಖ್ಯೆ			
			2008–09	2009–10	2010–11	ಒಟ್ಟು
1	ಔರಾದ್	ಗ್ರಾಮೀಣ ಆಶ್ರಯ	1259	0	0	1259
2	ಔರಾದ್	ಗ್ರಾಮೀಣ ಅಂಬೇಡ್ಕರ್	296	150	135	581
3	ಔರಾದ್	ಇಂದಿರಾ ಆವಾಸ್ ಯೋಜನೆ	911	1175	0	2086
4	ಔರಾದ್	ಬಸವ ವಸತಿ ಯೋಜನೆ	0	0	3313	3313
5	ಔರಾದ್	ವಾಜಪೇಯಿ ನಗರ ವಸತಿ ಯೋಜನೆ	0	0	0	0
		ಒಟ್ಟು	**2466**	**1325**	**3448**	**7239**
6	ಬಸವಕಲ್ಯಾಣ	ಗ್ರಾಮೀಣ ಆಶ್ರಯ	1320	0	0	1320
7	ಬಸವಕಲ್ಯಾಣ	ಗ್ರಾಮೀಣ ಅಂಬೇಡ್ಕರ್	141	93	138	372
8	ಬಸವಕಲ್ಯಾಣ	ಇಂದಿರಾ ಆವಾಸ್ ಯೋಜನೆ	589	900	0	1489
9	ಬಸವಕಲ್ಯಾಣ	ಬಸವ ವಸತಿ ಯೋಜನೆ	0	0	2582	2444
10	ಬಸವಕಲ್ಯಾಣ	ವಾಜಪೇಯಿ ನಗರ ವಸತಿ ಯೋಜನೆ	0	0	0	0
		ಒಟ್ಟು	**2050**	**993**	**2582**	**5625**
11	ಬಾಲ್ಕಿ	ಗ್ರಾಮೀಣ ಆಶ್ರಯ	1150	0	0	1150
12	ಬಾಲ್ಕಿ	ಗ್ರಾಮೀಣ ಅಂಬೇಡ್ಕರ್	46	97	70	213
13	ಬಾಲ್ಕಿ	ಇಂದಿರಾ ಆವಾಸ್ ಯೋಜನೆ	555	577	0	1332
14	ಬಾಲ್ಕಿ	ಬಸವ ವಸತಿ ಯೋಜನೆ	0	0	2066	2066
15	ಬಾಲ್ಕಿ	ವಾಜಪೇಯಿ ನಗರ ವಸತಿ ಯೋಜನೆ	0	0	0	0
		ಒಟ್ಟು	**1751**	**674**	**2136**	**4561**
16	ಬೀದರ್	ಗ್ರಾಮೀಣ ಆಶ್ರಯ	778	0	0	778
17	ಬೀದರ್	ಗ್ರಾಮೀಣ ಅಂಬೇಡ್ಕರ್	116	20	0	136
18	ಬೀದರ್	ಇಂದಿರಾ ಆವಾಸ್ ಯೋಜನೆ	660	433	0	1093
19	ಬೀದರ್	ಬಸವ ವಸತಿ ಯೋಜನೆ	0	0	1612	1612
20	ಬೀದರ್	ವಾಜಪೇಯಿ ನಗರ ವಸತಿ ಯೋಜನೆ	0	0	0	0
		ಒಟ್ಟು	**1554**	**453**	**1612**	**3619**
21	ಹುಮನಾಬಾದ್	ಗ್ರಾಮೀಣ ಆಶ್ರಯ	1079	0	0	1079
22	ಹುಮನಾಬಾದ್	ಗ್ರಾಮೀಣ ಅಂಬೇಡ್ಕರ್	153	0	0	153
23	ಹುಮನಾಬಾದ್	ಇಂದಿರಾ ಆವಾಸ್ ಯೋಜನೆ	387	781	0	1168
24	ಹುಮನಾಬಾದ್	ಬಸವ ವಸತಿ ಯೋಜನೆ	0	0	2206	2206
25	ಹುಮನಾಬಾದ್	ವಾಜಪೇಯಿ ನಗರ ವಸತಿ ಯೋಜನೆ	0	0	0	0
		ಒಟ್ಟು	**1619**	**781**	**2206**	**4606**
26	ಚಿಟಿಗುಪ್ಪ	ವಾಜಪೇಯಿ ನಗರ ವಸತಿ ಯೋಜನೆ	0	0	0	0
		ಒಟ್ಟು	**0**	**0**	**0**	**0**
		ಅಂತೂ ಒಟ್ಟು	**9440**	**4226**	**11984**	**25650**